

# ಬೆಳಕಿನ ನೆರಳು

## ಮಹಾತ್ಮ ಮತ್ತು ಹರಿಲಾಲ್

■ ಮೂಲ: **ದಿನಕರ್ ಜೋಶಿ**
■ ಕನ್ನಡಕ್ಕೆ: **ಡಿ.ಎನ್.ಶ್ರೀನಾಥ್**
ಕಲೆ: ಮನೋಹರ ಆಚಾರ್ಯ

## ಬಾಪೂ ಜತೆ ಹರಿಲಾಲ

ಬಾಪೂ ಈ ಭಾರದಿಂದ ಯಾವ ರೀತಿಯಲ್ಲಿ ಕುಸಿಯುತ್ತಿದ್ದಾರೆ ಎಂಬ ಬಗ್ಗೆ ಯೋಚಿಸಿ ಹರಿಲಾಲ ತುಂಬಾ ಕಳವಳಗೊಳ್ಳುತ್ತಿದ್ದ. ಆರು ಅಡಿ ಎತ್ತರದ, ಬಲಿಷ್ಠ ಬ್ರಿಟಿಷರೆದುರು ಬಾಪೂ ದುರ್ಬಲರಂತೆ, ಒಣಗಿದ ಕಟ್ಟಿಗೆಯಂತೆ ತೋರುತ್ತಿದ್ದರು. ಇದರಿಂದಾಗಿ ಹರಿಲಾಲ ತುಂಬಾ ವ್ಯಗ್ರತೆಯನ್ನು ಮನಗಾಣುತ್ತಿದ್ದ. ಬೆಳ್ಳಂಬೆಳಿಗ್ಗೆಯಿಂದ ತಡರಾತ್ರಿಯವರೆಗೆ ಕೆಲಸಕಾರ್ಯಗಳಲ್ಲಿ ಮಗ್ನರಾದ ಬಾಪೂ, ಮಲಗಲು ಬಂದಾಗ ಬಡಪಾಯಿ ಬಾ ಅವರ ಹಾದಿಯನ್ನೇ ಕಾಯುತ್ತಾ ಎಚ್ಚರದಿಂದಿರುತ್ತಿದ್ದರು.

ಬಾ ಅವರ ನೆನಪು ಮಾತ್ರದಿಂದಲೇ ಹರಿಲಾಲ ಇದ್ದಕ್ಕಿದ್ದಂತೆ ವ್ಯಾಕುಲಗೊಂಡ. ಮೊದಲ ಬಾರಿಗೆ ಆಫ್ರಿಕಾದಲ್ಲಿ ಇರುವ ಅವಧಿ ಪೂರ್ಣಗೊಳಿಸಿ ಎಲ್ಲರೂ ಹಿಂದೂಸ್ತಾನಕ್ಕೆ ಮರಳಿ ಬರುವ ಸಿದ್ಧತೆಯಲ್ಲಿರುವಾಗಿನ ಕ್ಷಣಗಳನ್ನು ಹರಿಲಾಲ ನೆನಪಿಸಿಕೊಂಡ. ಇನ್ನು ಎಲ್ಲರೂ ನಮ್ಮ ದೇಶಕ್ಕೆ ಹೋಗಿ ಶಾಂತಿಯಿಂದ ಇರುತ್ತೇವೆ; ತಾನು, ಮಣಿಲಾಲ, ರಾಮದಾಸ ಎಲ್ಲರೂ ಒಂದು ಜಾಗದಲ್ಲಿದ್ದು ಅಧ್ಯಯನವನ್ನು ಮಾಡುತ್ತೇವೆ, ಬಾಪೂರವರ ಹೆಗಲ ಮೇಲಿದ್ದ ಈ ಹೋರಾಟದ ವಿಶಾಲ ಭಾರ ಇಳಿಯುವುದೆಂಬ ಸುಂದರ ಕನಸನ್ನು ಆಗ ಹರಿಲಾಲ ಕಾಣುತ್ತಿದ್ದ. ಬಡಪಾಯಿ ಬಾ, ದೇಶಕ್ಕೆ ಹೋಗಲು ವ್ಯಾಕುಲಗೊಳ್ಳುತ್ತಿದ್ದರು ಎಂಬುದನ್ನು ಹರಿಲಾಲ ತಿಳಿದಿದ್ದ. ಬಾಪೂ ಅವರ ಕೆಲಸ ಕಾರ್ಯಗಳನ್ನು ಹಾಗೂ ಅವರ ಇಚ್ಛೆಯನ್ನು ಸದಾ ಬ್ರಹ್ಮ ವಾಕ್ಯವೆಂದು ತಿಳಿದು ಅದರಂತೆ ನಡೆಯುವ ಬಾ ಇಡೀ ಹೋರಾಟದ ಬಗ್ಗೆ ಹೆಚ್ಚು ತಿಳಿದಿರಲಿಲ್ಲ ಎಂಬ ವಿಷಯ ಹತ್ತುಹನ್ನೆರಡು ವಯಸ್ಸಿನ ಹರಿಲಾಲನಿಂದ ಮರೆಯಾಗಿರಲಿಲ್ಲ. ಬಾಪೂ ಏನೇ ಹೇಳಿದರೂ, ಹೇಗೆ ಹೇಳಿದರೂ, ಎಲ್ಲವನ್ನೂ ಸಂತಸದಿಂದ ಮಾಡಲು ಬಾ ಸದಾ ಸಂತಸದಿಂದ ಸಿದ್ಧರಾಗಿರುತ್ತಿದ್ದರು. ತನ್ನ ತಾಯಿಯನ್ನು ನೆನೆದು ಹರಿಲಾಲ ಭಾವಾವೇಶಕ್ಕೊಳಗಾದ.

## ಬಡಪಾಯಿ ಬಾ

ಆಫ್ರಿಕಾವನ್ನು ತ್ಯಜಿಸಿ ಎಲ್ಲರೂ ಹಿಂದೂಸ್ತಾನಕ್ಕೆ ಹೋಗಲು ಹಡಗನ್ನು ಹಿಡಿಯಬೇಕಿತ್ತು, ಇದಕ್ಕೂ ಒಂದು ರಾತ್ರಿ ಮೊದಲು ಘಟಿಸಿದ ಘಟನೆಯನ್ನು ಹರಿಲಾಲ ಎಂದೂ ಮರೆಯಲು ಸಾಧ್ಯವಿರಲಿಲ್ಲ. ಅಬ್ದುಲ್ಲಾ ದಾದಾ, ರುಸ್ತುಮ್ ಚಾಚಾ, ಬಾಪೂ ಅವರ ಕಚೇರಿಯಲ್ಲಿ ಕೆಲಸ ಮಾಡುವ ಗುಮಾಸ್ತ ರಿಚ್ ಹೀಗೆ ಅನೇಕ ಜನ ಸೇರಿ ಆ ದಿನಗಳಲ್ಲಿ ಬಾಪೂ ಅವರ ಬೀಳ್ಕೊಡುಗೆಯ ಸಮಾರಂಭವನ್ನು ಏರ್ಪಡಿಸಿದ್ದರು.

ನಿತ್ಯ ಒಂದಲ್ಲ ಒಂದು ಸ್ಥಳದಲ್ಲಿ ಭೋಜನಕ್ಕೆ ಆಹ್ವಾನವಿರುತ್ತಿತ್ತು. ಪುಷ್ಪಮಾಲೆಗಳಿಂದ ಗೌರವಿಸಲಾಗುತ್ತಿತ್ತು. ಎಲ್ಲರೂ ಬಾಪೂ ಅವರ ಸೇವೆಯಿಂದ ಗದ್ಗದಿತರಾಗುತ್ತಿದ್ದರು, ಭಾವುಕರಾಗುತ್ತಿದ್ದರು; ಉಡುಗೊರೆಗಳ ಅರ್ಪಣೆ ಭರದಿಂದ ನಡೆಯುತ್ತಿತ್ತು. ಆಗ ಅದೆಷ್ಟೋ ಅಮೂಲ್ಯ ವಸ್ತುಗಳು, ವಿಚಿತ್ರ ವಸ್ತುಗಳನ್ನು ಬಾಪೂ ಅವರಿಗೆ ಕೊಡಲಾಯಿತು. ಬಾ ಅವರಿಗೂ ಉಡುಗೊರೆಗಳು ಲಭಿಸಿದವು. ಹರಿಲಾಲ ಮತ್ತು ಅವನ ತಮ್ಮಂದಿರಿಗೂ ಚಿಕ್ಕಪುಟ್ಟ ಉಡುಗೊರೆಗಳನ್ನು ಕೊಡಲಾಯಿತು. ಹಾಗಂತ ಮನೆಯಲ್ಲಿ ಯಾವುದೇ ಬೆಲೆಬಾಳುವ ವಸ್ತುಗಳಿರಲಿಲ್ಲ. ಈ ಉಡುಗೊರೆಗಳಿಂದ ಮನೆ ತುಂಬಿತ್ತು. ಬಂಗಾರದ ದೊಡ್ಡ ಹಾರವೊಂದನ್ನು ಒಬ್ಬರು ಬಾ ಅವರ ಕೊರಳಿಗೆ ಹಾಕಿದ್ದರು, ಈ ಹಾರ ಧರಿಸಿದ ಬಾ ಅದೆಷ್ಟು ಚೆಂದ ಕಾಣಿಸುತ್ತಿದ್ದರು! ಹರಿಲಾಲನಿಗೆ, ಬಾ ಅವರ ಶರೀರದಲ್ಲಿ ಎಂದೂ, ಯಾವ ಬಂಗಾರದ ಆಭರಣವನ್ನು ನೋಡಿದ್ದು ನೆನಪಿಲ್ಲ. 'ಹರಿ, ನಿನ್ನ ತಂದೆಗೆ ಆಭರಣಗಳು ಇಷ್ಟವಾಗುವುದಿಲ್ಲ, ಅದಕ್ಕೇ ನಾನು ಆಭರಣಗಳನ್ನು ತೊಡುವುದನ್ನು ಬಿಟ್ಟಿದ್ದೇನೆ' ಎಂದು ಬಾ ಹೇಳುತ್ತಿದ್ದರು.

ಹೊರಡುವುದಕ್ಕೆ ಒಂದು ರಾತ್ರಿ ಮೊದಲು ಬಾಪೂ ಆ ಉಡುಗೊರೆಗಳನ್ನು ಪ್ರತ್ಯೇಕವಾಗಿ ಇಡಿಸಿದರು. ರೇವುಪಟ್ಟಣಕ್ಕೆ ತೆಗೆದುಕೊಂಡು ಹೋಗುವ ಸಾಮಾನುಗಳಲ್ಲಿದ್ದ ಬೆಲೆಬಾಳುವ ವಸ್ತುಗಳನ್ನು ಬಾಪೂ ಪ್ರತ್ಯೇಕಗೊಳಿಸಿದರು. ಈಗ